# 7. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ ದುರ್ಗಿಗುಡಿ ಶಿವಮೊಗ್ಗ.



ನಮ್ಮ ಶಾಲಾ ಚಿಣ್ಣರ ತೋಟದಲ್ಲಿ ಬಣ್ಣದ ಹೂಗಳಂತೆ ಸುಂದರವಾಗಿ ಅರಳಿದ ಹಾಗೂ ಅರಳುತ್ತಲೇ ಇರುವ ನಮ್ಮ ವಿದ್ಯಾರ್ಥಿಗಳ ಕಲಿಕಾ ಪ್ರಗತಿಗೆ ಮೂಲ ಕಾರಣ ನಮ್ಮ ಶಾಲಾ ಶಿಕ್ಷಕರ ಅವಿರತ ಶ್ರಮ. ಪ್ರತಿ ತರಗತಿಯಲ್ಲೂ ಸುಮಾರು 45–50 ವಿದ್ಯಾರ್ಥಿಗಳಿರುವುದನ್ನು ಕಣ್ತುಂಬಿಕೊಳ್ಳುವುದೇ ಒಂದು ಸಂತೋಷ. ಆದರೆ, ಪ್ರತಿ ಮಗುವಿಗೂ ವೈಯಕ್ತಿಕ ಪ್ರಾಶಸ್ತ್ಯ ನೀಡಿ ಸಾಮರ್ಥ್ಯವಾರು ಸಫಲತೆಯನ್ನು ಗುರುತಿಸುವುದು ಒಂದು ಸವಾಲೇ ಸರಿ. ಇದನ್ನು ಅತ್ಯಂತ ಜವಾಬ್ದಾರಿಯಿಂದ ಪ್ರಾಮಾಣಿಕವಾಗಿ ನಮ್ಮ ಶಿಕ್ಷಕರು ನಿರ್ವಹಿಸುತ್ತಿದ್ದಾರೆ.

ಕಲಿಕಾ ಬೋಧನಾ ಪ್ರಕ್ರಿಯೆ ಸುಗಮವಾಗಿ ಸಾಗಲು ಪ್ರಸ್ತುತ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ಚಂದ್ರಪ್ಪ ಡಿ.ರವರು ಹಗಲಿರುಳೆನ್ನದೆ ಚೈತನ್ಯದ ಚಿಲುಮೆಯಂತೆ ಎಲ್ಲರಲ್ಲೂ ನವೋಲ್ಲಾಸವನ್ನು ಹುರಿದುಂಬಿಸುತ್ತಿರುವ ಅವರ ಕಾರ್ಯವೈಖರಿ ಇತರರಿಗೆ ಮಾದರಿಯಾಗಿದೆ ಜೊತೆಗೆ ಉತ್ಸಾಹಿ, ಶಿಕ್ಷಣ ಪ್ರೇಮಿ, ಸೇವಾತುಡಿತವಿರುವ ಶ್ರೀಮತಿ ಪೂರ್ಣಿಮ ಹೆಚ್. ನಮ್ಮ ಶಾಲಾ SDMC ಅಧ್ಯಕ್ಷರಾಗಿದ್ದು, ಸಮಾನ ಮನಸ್ಕರಾದ SDMC ಸದಸ್ಯರೊಂದಿಗೆ ಸದಾ ಮಕ್ಕಳ ಹಿತವನ್ನು ಬಯಸಿ ಶಾಲಾ ಭೌತಿಕ ಚಿತ್ರಣವನ್ನೇ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಲ್ಲಿ ಇವರೆಲ್ಲರ ಶ್ರಮ ಸಾರ್ಥಕ.

ಇವರ ಮಾತಿನಂತೆ ಈ ನಿಟ್ಟಿನಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ಉತ್ಸುಕರಾಗಿರುವ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ಚಂದ್ರಪ್ಪ ಡಿ ರವರು ಹಾಗೂ ಶಿಕ್ಷಕ ವೃಂದದವರ ಜೊತೆಗೆ ಶಾಲೆಯ ಎಲ್ಲಾ ಕಾರ್ಯಕ್ರಮಗಳಿಗೆ ಆನಂದದಿಂದ ಪ್ರೋತ್ಸಾಹ ನೀಡಲು ಸದಾ ಸಿದ್ಧರಾಗಿರುವ ನಮ್ಮ ಶಾಲೆಯ S.D.M.C ಅಧ್ಯಕ್ಷರಾದ ಶ್ರೀಮತಿ ಪೂರ್ಣಿಮಾ ಹೆಚ್.ಎಂ. ಹಾಗೂ ಸದಸ್ಯ ವೃಂದ ದವರೆಲ್ಲರೂ ಮಕ್ಕಳ ಸರ್ವತೋಮುಖ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

"ಉತ್ತಮ ಚಿಂತನೆಗಳು ಮಾತ್ರ ಉತ್ತಮ ಸಮಾಜವನ್ನು ನಿರ್ಮಿಸಬಲ್ಲವು" ಎಂದು ಉತ್ತಮ ಕಾರ್ಯಗಳನ್ನು "ಯಶೋಗಾಥೆ" ಅಡಿಯಲ್ಲಿ ದಾಖಲಿಸುವ ಸತ್ಕಾರ್ಯದಲ್ಲಿ ತೊಡಗಿದ್ದು ಒಂದು ವಿಶೇಷ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಾಲಾ ಹಂತದ ಸಣ್ಣಪುಟ್ಟ ಅಭಿವೃದ್ಧಿ ಕಾರ್ಯಗಳು ಎಲೆಮರೆಯ ಕಾಯಿಗಳಾಗಿ ಹಣ್ಣಾಗಿ ಉದುರುವ ಬದಲು ಯಶೋಮಾರ್ಗದಲ್ಲಿ ಬಿತ್ತರಗೊಂಡು ಅದರ ಸವಿಯನ್ನು ಎಲ್ಲರಿಗೂ ಹಂಚಿ ಮತ್ತೊಬ್ಬರಿಗೆ ಮಾದರಿಯಾಗಲೆಂದು ಶಿಕ್ಷಕ–ಶಿಕ್ಷಣ ಯೋಜನೆಯಡಿ ಪ್ರಾಂಶುಪಾಲರು, ಡಯಟ್ ಶಿವಮೊಗ್ಗ ಇವರ ನಿರ್ದೇಶನದಂತೆ ಈ ಯಶೋಗಾಥೆ ಶೀರ್ಷಿಕೆ ಅಡಿಯಲ್ಲಿ ನಮ್ಮ ಶಾಲೆಯಲ್ಲಿ ಕೈಗೊಂಡ ಭೌತಿಕ ಅಭಿವೃದ್ಧಿ ಕಾರ್ಯಗಳು ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಶೀಲ ಬೆಳವಣಿಗೆಯ ಕಾರ್ಯ ಚಟುವಟಿಕೆಗಳಲ್ಲಿ ಆದ ಅನೇಕ ಯಶಸ್ಸುಗಳಲ್ಲಿ ಕೆಲವು ಪ್ರಮುಖ ಅಂಶಗಳನ್ನು ಪ್ರಸ್ತುತ ಪಡಿಸುತ್ತಿದ್ದೇವೆ.





NCF-2005ರ ಆಶಯದಂತೆ ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವಲ್ಲಿ ಪಠ್ಯ ಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಅಂತರ್ಗತ ವಿಧಾನ (Integrated Approach) ರಚನಾತ್ಮಕ ವಿಧಾನ (Constuctive Approach) ಮತ್ತು ಸುರುಳಿಯಾಕಾರದ ವಿಧಾನ (Spiral Approach)ಗಳನ್ನು ಅಳವಡಿಸಿಕೊಂಡು ಪರೀಕ್ಷೆಗಳ ಹೊರತಾಗಿ "ನೋಡುತ್ತಾ ತಿಳಿ ಮಾಡುತ್ತಾ ಕಲಿ ಆಡುತ್ತಾ ನಲಿ" ಎಂದು ಅನುಭವಗಳ ಮೂಲಕ ಕೌಶಲ್ಯಗಳನ್ನು ಮಕ್ಕಳಿಗೆ ತರಬೇತಿಗೊಳಿಸುವಲ್ಲಿ ನಾವು ಸುಗಮಕಾರರಾಗಿದ್ದೇವೆ. ಸಮಗ್ರ ದೃಷ್ಟಿಕೋನದಿಂದ ಶಿಕ್ಷಣ ವ್ಯವಸ್ಥೆಯನ್ನು ಅತ್ಯಂತ ಯಶಸ್ವಿಯಾಗಿ ಕಾರ್ಯೋನ್ಮುಖಗೊಳಿಸಿ ವಿದ್ಯಾರ್ಥಿಗಳ ಪ್ರಗತಿಗೆ ರಹದಾರಿಯಾಗಿರುವುದು ಸಂತೋಷವೆನಿಸಿದೆ. ಸಣ್ಣ ಸಣ್ಣ ಬದಲಾವಣೆಯ ಒಟ್ಟು ಮೊತ್ತವೇ ಒಂದು ದೊಡ್ಡ ಯಶಸ್ಸಾಗಿ ಇಂದು ನಮ್ಮ ಶಾಲೆಯು ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಾಲೆಗಳಿಗೆ ಮಾದರಿಯಾಗಿದೆ.

**ಶಾಲೆಯ ಹಿನ್ನೆಲೆ:–** ಮಲೆನಾಡಿನ ಹೆಬ್ಬಾಗಿಲು ಎಂದು ಕರೆಯಲ್ಪಡುವ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ **ದುರ್ಗಿಗುಡಿ.** ಈ ಶಾಲೆ ಕರ್ನಾಟಕ ರಾಜ್ಯದಲ್ಲಿನ "ಏಕೈಕ ಸರ್ಕಾರಿ ಆಂಗ್ಲ ಮಾಧ್ಯಮ ಶಾಲೆ" ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಇತಿಹಾಸ ಸೃಷ್ಟಿಸಿದ್ದು ಹೆಮ್ಮೆಯ ವಿಷಯವಾಗಿದೆ. ಶಿವಮೊಗ್ಗ ಜಿಲ್ಲೆಯ ತಿಲಕ್ ನಗರದಲ್ಲಿರುವ ರಾಘವೇಂದ್ರ ಸ್ವಾಮಿಯ ಮಠದ ಗೋಡೆಗೆ ದುರ್ಗಿಗುಡಿ ಆಂಗ್ಲ ಮಾಧ್ಯಮ ಶಾಲೆಯು ಹೊಂದಿಕೊಂಡಿದೆ. ಶ್ರೀ ರಾಘವೇಂದ್ರ ಸ್ವಾಮಿಯ ಕೃಪಾಶೀರ್ವಾದ ಯಾವಾಗಲೂ ಈ ಶಾಲೆಯ ಮೇಲಿದೆ. ನಮ್ಮ ಶಾಲೆ ಇರುವ ಬಡಾವಣೆಯಲ್ಲಿ ದುರ್ಗಮ್ಮ ದೇವಿಯ ಪ್ರತಿಷ್ಠಾಪನೆ ಮಾಡಿರುವ ಸ್ಥಳ ಆಗಿರುವುದರಿಂದ ಈ ಬಡಾವಣೆ ದುರ್ಗಿಗುಡಿ ಎಂಬ ಹೆಸರಿನಿಂದ ನಾಮಾಂಕಿತವಾಗಿದೆ.

ಸರ್ಕಾರಿ ಮಾದರಿ ಆಂಗ್ಲ ಮಾಧ್ಯಮ ಶಾಲೆಗೆ ಮೊದಲು "ಪುಲಕೇಶಿ ವ್ಯಾಯಾಮ ಶಾಲೆ" ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ದಿನಾಂಕ: 01–06–1922 ರಿಂದ ಕನ್ನಡ ಮಾಧ್ಯಮ ಬಾಲಕಿಯರ ಶಾಲೆ ಎಂದಾಯಿತು. ನಂತರ 1923ರಲ್ಲಿ ಬಾಲಕರ ಕನ್ನಡ ಮಾಧ್ಯಮ ಶಾಲೆಯಾಗಿ ಪರಿವರ್ತನೆಯಾಯಿತು. ನಂತರ 1973 ರಿಂದ ಇದು ಸಹ ಶಿಕ್ಷಣದೊಂದಿಗೆ ಸರ್ಕಾರಿ ಆಂಗ್ಲ ಮಾಧ್ಯಮ ಶಾಲೆಯಾಗಿ ಮುಂದುವರೆದಿದೆ.

ನಮ್ಮ ಶಾಲೆಯು ಈಗಲೂ ಸಹ ಪ್ರತಿಷ್ಠಿತ ಶಾಲೆಯಾಗಿ ಮುಂದುವರೆದಿದ್ದು, ಪ್ರಸ್ತುತವಾಗಿ ಶಾಸಕರ ಮಾದರಿ ಶಾಲೆಯಾಗಿ ನಾಮಾಂಕಿತವಾಗಿದೆ. ಪ್ರಸ್ತುತ 25 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 2019–20ನೇ ಸಾಲಿನಲ್ಲಿನ 910 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ನಮ್ಮ ಶಾಲೆ ಆರಂಭದಿಂದಲೂ ಸರಾಸರಿ 200 ರಿಂದ 250 ವಿದ್ಯಾರ್ಥಿಗಳನ್ನು ಮತ್ತು 6 ಜನ ಶಿಕ್ಷಕರನ್ನು ಹೊಂದಿತ್ತು, 2002ರ ನಂತರ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ 2005–06ನೇ ಸಾಲಿನಲ್ಲಿ ಸುಮಾರು 750 ವಿದ್ಯಾರ್ಥಿಗಳಾದರು, ಆದರೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರು ಇರಲಿಲ್ಲ, ಆಗ ಶಿಕ್ಷಕರ ಕೊರತೆಯನ್ನು ನೀಗಿಸಲು ನಮ್ಮ ಶಿಕ್ಷಣ ಇಲಾಖೆ ಶಿಕ್ಷಕರನ್ನು ನಿಯೋಜನೆ ಮಾಡಿ ಸಹಕರಿಸಿದ್ದನ್ನು ಮರೆಯುವಂತಿಲ್ಲ.

2009–10ರ ವೇಳೆಗಾಗಲೆ ವಿದ್ಯಾರ್ಥಿಗಳ ಸಂಖ್ಯೆ 850ಕ್ಕೆ ಏರಿದ್ದು 4 ಜನ ಶಿಕ್ಷಕರು ವರ್ಗಾವಣೆಯಲ್ಲಿ ಬಂದರು. 2012–13ರ ಸಾಲಿನಲ್ಲಿ ಮತ್ತೆ 5 ಜನ ಶಿಕ್ಷಕರು ವರ್ಗಾವಣೆಯಲ್ಲಿ ಬಂದುದ್ದರಿಂದ ತಕ್ಕ ಮಟ್ಟಿಗೆ ಶಿಕ್ಷಕರ ಕೊರತೆ ಕಡಿಮೆಯಾಯಿತು. ಹೀಗೆ 2015–16 ಸಾಲಿನಿಂದ ಸುಮಾರು 950 ವಿದ್ಯಾರ್ಥಿಗಳಾದರು. ಮತ್ತೆ 5 ಜನ ಶಿಕ್ಷಕರು ಹೆಚ್ಚುವರಿ ವರ್ಗಾವಣೆ ಮೂಲಕ ನಮ್ಮ ಶಾಲೆಗೆ ಬಂದರು.

ಪ್ರಸ್ತುತ 2019–20ನೇ ಸಾಲಿನಲ್ಲಿ 910 ವಿದ್ಯಾರ್ಥಿಗಳಿದ್ದು 1 ರಿಂದ 7ನೇ ತರಗತಿಯ 22 ವಿಭಾಗಗಳಲ್ಲಿ ಸುಮಾರು 40–45 ವಿದ್ಯಾರ್ಥಿಗಳಂತೆ ಅಭ್ಯಾಸ ಮಾಡುತ್ತಿದ್ದಾರೆ. 22 ಜನ ಸಹಶಿಕ್ಷಕರು, ಇಬ್ಬರು ದೈಹಿಕ ಶಿಕ್ಷಕರನ್ನು ಒಳಗೊಂಡಂತೆ ಮುಖ್ಯಶಿಕ್ಷಕರು ಪ್ರತಿನಿತ್ಯ ಸಾವಿರಾರು ಸಮಸ್ಯೆಗಳನ್ನು ಎದುರಿಸುತ್ತಾ ತಮ್ಮ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸಿದುದರ ಪರಿಣಾಮವೇ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳದ ಯಶೋಗಾಥೆ ಎಂಬುದು ನಮ್ಮ ಹೆಮ್ಮೆ. ಪ್ರತಿ ವರ್ಷ ಸುಮಾರು 100 ರಿಂದ 150 ವಿದ್ಯಾರ್ಥಿಗಳು ಖಾಸಗಿ ಶಾಲೆಯಿಂದ ನಮ್ಮ ಸರ್ಕಾರಿ ಶಾಲೆಯನ್ನರಸಿ ಬರುತ್ತಿರುವುದು ವಿಶೇಷ.

**ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆಗಳ ನಿರ್ವಹಣೆ :–** ಪ್ರತಿ ಮಗುವಿನ ಪ್ರಗತಿ ಶಿಕ್ಷಣದಿಂದ ಸಾಧ್ಯವೆನಿಸಿದರೂ ಅದಕ್ಕೆ ಪೂರಕವಾದ ವಾತಾವರಣ ಇಲ್ಲದೇ ಇರುವುದು ಕೂಡಾ ಯೋಜನೆಯ ಅಪೂರ್ಣತೆಗೆ ಕಾರಣವಾಗಬಹುದು. ಹಾಗಾಗಿ ಇದರ ಜೊತೆ ಪೂರಕವಾದ ಯೋಜನೆಗಳನ್ನು ಹಂತಹಂತವಾಗಿ ಇಲಾಖಾ ವತಿಯಿಂದ ಜಾರಿಯಾಗುತ್ತಿದೆ. ಅವುಗಳಲ್ಲಿ ಕ್ಷೀರಭಾಗ್ಯ ಹಾಗೂ ಅಕ್ಷರದಾಸೋಹವು ಜೊತೆ ಜೊತೆಗೆ ಸಾಗುತ್ತಿದೆ. ಮುಖ್ಯ ಅಡುಗೆಯವರು ಸೇರಿದಂತೆ ಆರು ಜನ ಸಿಬ್ಬಂದಿಯೊಂದಿಗೆ ಮುಖ್ಯೋಪಾಧ್ಯಾಯರಾದ ಶ್ರೀ ಡಿ. ಚಂದ್ರಪ್ಪ ಇವರು ಶ್ರೀಮತಿ ನಂದಾ ಸಹಶಿಕ್ಷಕಿ ಇವರ ಸಹಕಾರದೊಂದಿಗೆ ಪಟ್ಟಿ ಪ್ರಕಾರ ವಿವಿಧ ಅಡುಗೆಗಳನ್ನು ಮಾಡಿಸುತ್ತಾರೆ. ಪ್ರತಿ ನಿತ್ಯವು ಜವಾಬ್ದಾರಿ ಹಂಚಿಕೆಯಂತೆ ಶಿಕ್ಷಕರ ತಂಡವು ಗುಣಮಟ್ಟ, ಶುಚಿತ್ವ, ರುಚಿಯನ್ನು ಪರಿಶೀಲಿಸುತ್ತಿದ್ದು ಇದರ ಯಶಸ್ವಿಗೆ ಕಾರಣವಾಗಿದ್ದಾರೆ. ತಿಂಗಳಲ್ಲಿ ಒಂದು ದಿನ ಸಿಹಿ ಊಟವನ್ನು ಈ ಯೋಜನೆಯಲ್ಲಿ ನೀಡುತ್ತಿರುವುದು ವಿಶೇಷವೆನಿಸಿದೆ.







**ಶಾಲಾ ಭೌತಿಕ ವ್ಯವಸ್ಥೆ ಬಗ್ಗೆ ಮಾಹಿತಿ :-** ನಮ್ಮದು ದೊಡ್ಡ ಶಾಲೆ, ಅಗತ್ಯಗಳು ಸಾವಿರಾರು, ಸಮಸ್ಯೆಗಳು ಸವಾಲುಗಳು ನಿರಂತರ. ಇವೆಲ್ಲದರ ನಡುವೆ ನಮ್ಮ ಶಾಲಾ ಭೌತಿಕ ವ್ಯವಸ್ಥೆಯಲ್ಲಿ ಮೂಲಭೂತ ಅಗತ್ಯಗಳನ್ನು ಪೂರೈಸುವಲ್ಲಿ ಅನೇಕ ಪ್ರಯತ್ನಗಳು ಫಲ ನೀಡಿ ಶಾಲಾ ಚಿತ್ರಣವೇ ಬದಲಾಗಿದ್ದು ವಿಶೇಷ. ಸರ್ಕಾರಿ ಯೋಜನೆಗಳ ಅನುದಾನಗಳ ಜೊತೆಗೆ ಸಹೃದಯ ದಾನಿಗಳಿಂದ ಪ್ರಮುಖವಾಗಿ (ಶಾಲಾ ಆವರಣದಲ್ಲಿ) ಕಾರಿಡಾರ್ ಮತ್ತು ಗ್ರಿಲ್ ವ್ಯವಸ್ಥೆ, ಕೊಠಡಿಗಳ ನಿರ್ಮಾಣ, ವ್ಯವಸ್ಥಿತ ಶೌಚಾಲಯ ನಿರ್ಮಾಣ, ಕುಡಿಯಲು, ಅಡುಗೆಗೆ, ಕೈ ಮತ್ತು ತಟ್ಟೆ ಲೋಟ ತೊಳೆಯುವ ನೀರಿನ ಸೌಲಭ್ಯ, ಪೀಠೋಪಕರಣಗಳು, ಗ್ರಂಥಾಲಯ ವ್ಯವಸ್ಥೆ ಮತ್ತು ವಿಜ್ಞಾನ ಪ್ರಯೋಗಾಲಯದ ಪರಿಕರಗಳು ಹೀಗೆ ಹಲವಾರು ಕೊಡುಗೆಗಳು ನಮ್ಮ ಶಾಲಾ ಸೌಕರ್ಯವನ್ನು ಶ್ರೀಮಂತಗೊಳಿಸಿವೆ. ಈ ವರ್ಷದಲ್ಲಿ ಪ್ರವಾಹ ಪೀಡಿತರಾಗಿ ನಮ್ಮ ಶಾಲಾ ಮಕ್ಕಳೂ ನಲುಗಿದ್ದು ದುಃಖಕರ, ಅವರಿಗೆಲ್ಲರಿಗೂ ಶೈಕ್ಷಣಿಕ ಪರಿಕರಗಳನ್ನು ನೀಡುವುದರೊಂದಿಗೆ ದಾನಿಗಳು ಸೇವಾ ಸಾರ್ಥಕತೆಯನ್ನು ಮೆರೆದಿದ್ದಾರೆ.

**ಶಾಲಾ ಭೌತಿಕ ಸೌಲಭ್ಯಗಳ ಮಾಹಿತಿ ;-** ಅಬ್ಬಬ್ಬಾ "ಬಕಾಸುರನಿಗೆ ಅರೆಕಾಸಿನ ಮಜ್ಜಿಗೆ" ಎಂಬಂತೆ ನಮ್ಮ ಶಾಲಾ ಭೌತಿಕ ಸೌಲಭ್ಯಗಳ ಪೂರೈಕೆ ಮುಗಿಯದ ಕಾದಂಬರಿ ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆ ಅನುಷ್ಠಾನಕ್ಕಾಗಿ ಅಡುಗೆ ಮನೆ ಪರಿಕರಗಳ ವ್ಯವಸ್ಥೆಗೆ ಹಾಗೂ ಇತರೆ ಕೆಲಸಗಳಿಗೆ ಸರ್ಕಾರಿ ಅನುದಾನ ನಮ್ಮ 900 ಮಕ್ಕಳಿಗೆ ಸಾಕಾಗುವುದಿಲ್ಲ. (ಎಲ್ಲಾ ಸರ್ಕಾರಿ ಶಾಲೆಗೆ ಸಮಾನ ಅನುದಾನದ ಮೊತ್ತ) ಆದ್ದರಿಂದ ನಮ್ಮ ಶಾಲಾ ಶಿಕ್ಷಕರಾದ ಶ್ರೀಮತಿ ಜಸಿಂತ ಎಫ್. ಡಿಸೋಜಾ, ಶ್ರೀಮತಿ ನುಸ್ರತ್ ಜಹಾನ್ ಹುಟ್ಟು ಹಬ್ಬ ಆಚರಿಸಿಕೊಳ್ಳುವ ಮಕ್ಕಳು, 7ನೇ ತರಗತಿ ಮುಗಿಸಿಕೊಂಡು ಹೋಗುವ ವಿದ್ಯಾರ್ಥಿಗಳು, ಹೊಸ ದಾಖಲಾತಿ ಬಯಸಿ ಬರುವ ವಿದ್ಯಾರ್ಥಿಗಳು ಹೀಗೆ ಪಟ್ಟಿ ಮುಂದುವರೆಯುತ್ತದೆ ಇವರಿಂದ ಚಮಚಗಳು, ಸ್ಟೀಲ್ ಬಕೇಟ್‌ಗಳು, ಡಸ್ಟ್‌ಬಿನ್‌ಗಳು, ಪೊರಕೆಗಳು, ತಟ್ಟೆಗಳು, ಮಿಕ್ಸರ್, ಬಲ್ಬ್ ಸೆಟ್‌ಗಳು, ಫ್ಯಾನ್‌ಗಳು.,,,,, ಇತ್ಯಾದಿ ಪರಿಕರಗಳನ್ನು ನೀಡಿದ್ದಾರೆ. ಪರೋಕ್ಷವಾಗಿಯೂ ತಮ್ಮ ತರಗತಿ ಮಕ್ಕಳಿಗಾಗಿ ಅಭ್ಯಾಸ ಪರಿಕರ & ಇತರೆ ವಸ್ತುಗಳನ್ನು ಶಿಕ್ಷಕರು ನೀಡಿದ್ದನ್ನು ಇಲ್ಲಿ ಮರೆಯುವಂತಿಲ್ಲ. ಆಕಸ್ಮಿಕ ಅಪಘಾತಗಳಿಗೆ ಒಳಗಾದ ಮಕ್ಕಳಿಗೆ ಪ್ರಥಮ ಚಿಕಿತ್ಸೆಗಾಗಿ ತಮ್ಮ ಹಣವನ್ನು ಹಿಂದುಮುಂದೆ ನೋಡದೆ ಖರ್ಚು ಮಾಡುವ ಶಿಕ್ಷಕರನ್ನು ಗೌರವದಿಂದ ಸ್ಮರಿಸುತ್ತಿದ್ದೇವೆ.





**ಶಾಲಾ ವಿಶೇಷತೆಗಳು ನಮ್ಮ ಶಾಲಾ ಚಿತ್ರವಿರುವ ಅಂಚೆ ಲಕೋಟೆ**

ಭಾರತೀಯ ಅಂಚೆ ಇಲಾಖೆಯಿಂದ ಶಿಮೋಪ್ಲೆಕ್ಸ್ – 2018 ಜಿಲ್ಲಾ ಮಟ್ಟದ ಅಂಚೆ ಚೀಟಿ ಸಂಗ್ರಹದ ವಸ್ತು ಪ್ರದರ್ಶನದಲ್ಲಿ ಮಹಾತ್ಮ ಗಾಂಧೀಜಿಯವರ 150 ನೇ ಜನ್ಮದಿನದ ಅಂಗವಾಗಿ 20 ವಿಶೇಷ ಅಂಚೆ ಲಕೋಟೆಗಳನ್ನು ಬಿಡುಗಡೆ ಮಾಡಲಾಯಿತು. ಇವುಗಳಲ್ಲಿ ನಮ್ಮ ಶಾಲೆಯ ಚಿತ್ರವಿರುವ ಅಂಚೆ ಲಕೋಟೆಯು ಸಹ ಒಂದು ಎಂಬ ಹೆಮ್ಮೆ ನಮ್ಮದಾಗಿದೆ. ಈ ಹೆಮ್ಮೆಗೆ ಕಾರಣರಾದವರು ನಮ್ಮ ಶಾಲೆಯ ಹಳೇ ವಿದ್ಯಾರ್ಥಿನಿ ಶ್ರೀಮತಿ ಉಷಾ ರವರು ಶಿವಮೊಗ್ಗ ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ನೌಕರರಾಗಿದ್ದು ನಮ್ಮ ಶಾಲೆಯ ಗೌರವಾರ್ಥವಾಗಿ ಸುಮಾರು 30 ಸಾವಿರ ಹಣವನ್ನು ಅಂಚೆ ಇಲಾಖೆಗೆ ಪಾವತಿಸಿ ನಮ್ಮ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ, ದಿನಾಂಕ 08/12/2018ರಂದು ನಡೆದ ಸಮಾರಂಭದಲ್ಲಿ ನಮ್ಮ ಶಾಲಾ ಚಿತ್ರವಿರುವ 1 ಸಾವಿರ ಅಂಚೆ ಲಕೋಟೆಗಳನ್ನು ಹಾಗೂ ಗಾಂಧೀಜಿ ಭಾವಚಿತ್ರದ ಸ್ಟಾಂಪ್‌ನ ಫೋಟೋವನ್ನು ಶಾಲೆಗೆ ಕೊಡುಗೆಯಾಗಿ ನೀಡಿದ್ದು ವಿಶೇಷ.



ಇದು ಬರೀ ಸ್ಕೂಲಲ್ಲ, ಸೂಜಿಗಲ್ಲು!

925 ಮಕ್ಕಳಿರುವ ಸರ್ಕಾರಿ ಶಾಲೆಯ ಯಶೋಗಾಥೆ






ನಾಳೆಯಿಂದ ನಗರದಲ್ಲಿ 3 ದಿನ ಅಂಚೆ ಚೀಟಿಗಳ ಪ್ರದರ್ಶನ

ಕೋಟೆ ದೇವಳ ಸೇರಿ 20 ವಿಶೇಷ ಕವರ್ ಬಿಡುಗಡೆ

**ರಾಷ್ಟ್ರೀಯ ಹಬ್ಬಗಳ ಆಚರಣೆ**

- ❖ ಪ್ರತಿ ವರ್ಷ **ಡಿಆರ್ ಗ್ರೌಂಡ್**ನಲ್ಲಿ ನಡೆಯುವ **ಸ್ವಾತಂತ್ರ್ಯ ದಿನಾಚರಣೆಯ**ಲ್ಲಿ ನೃತ್ಯ ಪ್ರದರ್ಶನದಲ್ಲಿ ಭಾಗವಹಿಸುವ ಎಲ್ಲಾ ಖಾಸಗಿ ಶಾಲೆಗಳ ನಡುವೆ ನಮ್ಮ ಏಕೈಕ ಸರ್ಕಾರಿ ಶಾಲೆಯದು ಒಂದು ವಿಶೇಷ ಪೈಪೋಟಿ. ಸುಮಾರು 200 ಮಕ್ಕಳಿಂದ **ಸಾಮೂಹಿಕ ನೃತ್ಯ** ಪ್ರದರ್ಶನ ನೀಡುವ ಹೆಗ್ಗಳಿಕೆ ನಮ್ಮದು. ಅಲ್ಲಿ ನೆರೆದ ರಾಜಕೀಯ ಧುರೀಣರ, ಅಧಿಕಾರಿ ವರ್ಗದವರ ಹಾಗೂ ಸಾರ್ವಜನಿಕರ ಮನ್ನಣೆಗೆ ಪಾತ್ರವಾಗಿದೆ. ಇದರ ಯಶಸ್ವಿಗಾಗಿ ಶ್ರಮಿಸುವ ಶಿಕ್ಷಕರ ಹೊಣೆಗಾರಿಕೆಗೆ ಒಂದು ಸಲಾಂ.
- ❖ ದೈಹಿಕ ಶಿಕ್ಷಕರಾದ ಶ್ರೀ ರವಿ ಹೆಚ್. ಹಾಗೂ ರಮೇಶ್ ಬಣಕಾರ್‌ರವರ ಮಾರ್ಗದರ್ಶನದಲ್ಲಿ ಪ್ರತಿ ಗಣರಾಜ್ಯೋತ್ಸವದಲ್ಲೂ **ಸಾಮೂಹಿಕ ವ್ಯಾಯಮ**ದಲ್ಲಿ ಸುಮಾರು 200–250 ವಿದ್ಯಾರ್ಥಿಗಳು ಪಾಲ್ಗೊಳ್ಳುವುದು ಸರ್ಕಾರಿ ಶಾಲೆಗಳಲ್ಲಿಯೇ ಒಂದು ವಿಶೇಷ. ಹಾಗೆ ರಾಷ್ಟ್ರೀಯ ಹಬ್ಬಗಳಂದು ತರಬೇತಿ ಹೊಂದಿದ ತಂಡದೊಂದಿಗೆ **ಮಾರ್ಚ್‌ಫಾಸ್ಟ್**ನಲ್ಲಿ ಭಾಗವಹಿಸುವುದು ಎಲ್ಲಾ ಸರ್ಕಾರಿ ಶಾಲೆಗೂ ಒಂದು ಗೌರವ.
- ❖ ಪ್ರತಿ ವರ್ಷ 6 ಮತ್ತು 7 ನೇ ತರಗತಿಯ ಆಯ್ದ ವಿದ್ಯಾರ್ಥಿಗಳು **ಡಿ.ಸಿ ಕಛೇರಿ**ಯಲ್ಲಿ ರಾಷ್ಟ್ರೀಯ ಹಬ್ಬ ಆಚರಿಸುವುದು ವಿಶೇಷ.





 

- **ಸುದ್ದಿ ಮಾಧ್ಯಮಗಳಲ್ಲಿ ನಮ್ಮ ಶಾಲೆಯ ಹಿರಿಮೆ**

❖5 ಜುಲೈ 2018ರಲ್ಲಿ ಸುದ್ದಿ ವಾಹಿನಿ ಟಿ.ವಿ 18 ಹಾಗೂ ಇತರೆ ದೃಶ್ಯ ಮಾಧ್ಯಮಗಳಲ್ಲಿ ನಮ್ಮ ಶಾಲೆಯ ಉನ್ನತಿಗಳ ಬಗ್ಗೆ ಪ್ರಶಂಸೆಯು ಪ್ರಸಾರಗೊಂಡು ರಾಜ್ಯಾದ್ಯಂತ ಉತ್ತಮ ಶಾಲೆಯೆಂದು ಹೆಸರುವಾಸಿಯಾಯಿತು.

❖24 ಜುಲೈ 2018ರಂದು ಉದಯವಾಣಿ ಪತ್ರಿಕೆಯಲ್ಲಿ **'ನನ್ನ ಶಾಲೆ ನನ್ನ ಹೆಮ್ಮೆ'** ಸರಣಿಯ **"ಇದು ಬರೀ ಸ್ಕೂಲಲ್ಲ ಸೂಜಿಗಲ್ಲು ! ಕಾನ್ವೆಂಟ್ ಮಕ್ಕಳನ್ನು ಸೆಳೆವ ದುರ್ಗಿಗುಡಿ ಶಾಲೆ"** ಎಂಬ ಶೀರ್ಷಿಕೆ ಅಡಿಯಲ್ಲಿ 925 ಮಕ್ಕಳಿರುವ ಸರ್ಕಾರಿ ಶಾಲೆಯ ಯಶೋಗಾಥೆ ಎಂಬ ಲೇಖನ ಪ್ರಕಟಗೊಂಡಿರುವುದು ವಿಶೇಷವಾಗಿದ್ದು ಸರ್ಕಾರಿ ಶಾಲೆಗಳಿಗೆ ಒಂದು ಕೀರ್ತಿ ತಂದಿದೆ.

- **ನೆರೆ ಸಂತ್ರಸ್ತ ವಿದ್ಯಾರ್ಥಿಗಳಿಗೆ ಸಂತೈಸಿದ ದಾನಿಗಳು**

ಈ ಬಾರಿ ಜುಲೈ ತಿಂಗಳಿನಲ್ಲಿ ಸುರಿದ ಅತಿಯಾದ ಮಳೆಯಿಂದ ಕರ್ನಾಟಕದ ಅನೇಕ ಜಿಲ್ಲೆಗಳು ಅತಿವೃಷ್ಟಿಗೆ ಒಳಗಾಗಿವೆ, ಇದರಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯು ಸಹ ಹೊರತಾಗಿಲ್ಲ. ಅದರಲ್ಲೂ ಶಿವಮೊಗ್ಗ ನಗರದ ಅನೇಕ ಬಡಾವಣೆಗಳು ನೀರಿನಿಂದ ತುಂಬಿ ಹೋಗಿದ್ದವು. ಮಳೆ ರಜೆ ಮುಗಿದು ಶಾಲೆ ಆರಂಭವಾಗುತ್ತಿದ್ದಂತೆ ನೆರೆಪೀಡಿತ ಮಕ್ಕಳ ಪರಿಸ್ಥಿತಿ ಕೇಳಿ ಶಿಕ್ಷಕರು ಮರುಗಿದರು. ತಮ್ಮ ತಮ್ಮ ತರಗತಿ ಮಕ್ಕಳಿಗೆ ತಕ್ಷಣಕ್ಕೆ ಬೇಕಾದ ಕಲಿಕಾ ಸಾಮಾಗ್ರಿಗಳನ್ನು ಶ್ರೀಮತಿಯರಾದ ಭಾರತಿ ಎಸ್., ಭಾಗೀರತಿ ಎಂ.ಕೆ, ಜಯಲಕ್ಷ್ಮಿ ಕನ್ನ ನಾಯ್ಕ, ಕನ್ಯಾಕುಮಾರಿ ಚಿಂದಿ ಮುಂತಾದ ಶಿಕ್ಷಕಿಯರು ಕೊಡಿಸಿ ಮಕ್ಕಳಲ್ಲಿ ಭರವಸೆಯನ್ನು ತುಂಬಿದರು.

7ನೇ ತರಗತಿಯ ಸಿ ವಿಭಾಗದ ತರಗತಿ ಶಿಕ್ಷಕಿಯಾದ ಶ್ರೀಮತಿ ಉಷಾರಾಣಿ ಎಂ.ಸಿ ರವರ ಮಾರ್ಗದರ್ಶನದಂತೆ ವಿದ್ಯಾರ್ಥಿಗಳು ತಮ್ಮ ಸಹಪಾಠಿ ಕು|| ಶ್ರೀಜನ್‌ನಿಗೆ ದಿನಬಳಕೆ ವಸ್ತುಗಳನ್ನು ಹಾಗೂ ಅದೇ ತರಗತಿಯ ಪೋಷಕರಾದ ಶ್ರೀಮತಿ ಸುಮಲಕ್ಷ್ಮಿಯವರು ಒಂದು ಸಾವಿರ ರೂ.ಗಳ ಧನ ಸಹಾಯ ಮಾಡಿರುವುದು ಪ್ರಶಂಸನೀಯವಾಗಿದೆ.

ಈ ಮುಗ್ಧ ಮಕ್ಕಳ ಸ್ಥಿತಿಗತಿಗಳನ್ನು WhatsApp Group ನಲ್ಲಿ ಹಂಚಿಕೊಂಡ ನಮ್ಮ ಶಾಲಾ ಶಿಕ್ಷಕಿ ಶ್ರೀಮತಿ ದೀಪಾ ಕುಬಸದ್‌ರವರ ಕೋರಿಕೆಗೆ ಓಗೊಟ್ಟು ನಗರದ ಖ್ಯಾತ ವಕೀಲರಾದ ಶ್ರೀಪಾದ್‌ರವರು ವಕೀಲರ ಸಂಘದಿಂದ ಜೊತೆಗೆ ಶ್ರೀ ಸತ್ಯನಾರಾಯಣ್‌ರವರು ಶಾಲಾ ಸಮವಸ್ತ್ರ ಸೇರಿದಂತೆ ಕಲಿಕಾ ಸಾಮಾಗ್ರಿಗಳನ್ನು ನೀಡಿದರು. ಈ ಸತ್ಕಾರ್ಯದಲ್ಲಿ 35 ವಿದ್ಯಾರ್ಥಿಗಳು ಫಲಾನುಭವಿಗಳಾಗಿದ್ದು, ಶಿವಮೊಗ್ಗ ಜಿಲ್ಲಾ ಸಿವಿಲ್ ನ್ಯಾಯಾಲಯದ ಶ್ರೀಮತಿ ಸರಸ್ವತಿ ನ್ಯಾಯಾಧೀಶರು ಮತ್ತು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿರವರು ಆಗಮಿಸಿ ನಮ್ಮ ಮಕ್ಕಳನ್ನು ಹಾರೈಸಿದ್ದು ವಿಶೇಷ. ಈ ಸಂದರ್ಭದಲ್ಲಿ ಶ್ರೀ ಮಧು ವಕೀಲರು ಇವರು ಈ ಮಕ್ಕಳಿಗೆ ಇನ್ನೊಂದು ಜೊತೆ ಸಮವಸ್ತ್ರ ಹಾಗೂ ಬ್ಯಾಗ್-ಶೂ-ಸಾಕ್ಸ್‌ಗಳನ್ನು ನೀಡಲು 10 ಸಾವಿರ ರೂಗಳ ಧನಸಹಾಯ ಮಾಡಿದರು.

ಹಾಗೆಯೇ ತಡವಾಗಿ ಮಾಹಿತಿ ನೀಡಿದ ಉಳಿದ 15 ಮಕ್ಕಳಿಗೆ ಶ್ರೀ ಸಾಯಿ ಮಹಿಳಾ ಗೃಹನಿರ್ಮಾಣ ಸಹಕಾರಿ ಸಂಘದ ವತಿಯಿಂದ ಅಗತ್ಯ ಕಲಿಕಾ ಪರಿಕರಗಳನ್ನು ನೀಡುವಲ್ಲಿ ಶ್ರೀಮತಿ ಕನ್ಯಾಕುಮಾರಿ ಚಿಂದಿ ಸಹಕರಿಸಿದರು.

ಈ ರೀತಿಯಾಗಿ ಇವರೆಲ್ಲರೂ ನೆರೆ ಸಂತ್ರಸ್ತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾನವೀಯತೆಯಿಂದ ಸ್ಪಂದಿಸಿದ್ದು ಒಂದು ವಿಶೇಷ.





**ಶೈಕ್ಷಣಿಕವಾಗಿ ಮಾಹಿತಿ :–** ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕಾಗಿ ಪ್ರತಿ ವರ್ಷದ ವಾರ್ಷಿಕ ಕ್ರಿಯಾಯೋಜನೆಯಂತೆ ಪಠ್ಯ ಸಹಪಠ್ಯಗಳು ಸಮ್ಮಿಳಿತಗೊಂಡು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ (CCE)ದ ಚಟುವಟಿಕೆ ಆಧಾರಿತ ಬೋಧನಾ ವಿಧಾನಗಳೊಂದಿಗೆ, ಶಾಲಾ ಸಂಸತ್ತು, ವಿಜ್ಞಾನ ಸಂಘ, ಮೀನಾ ತಂಡ, ಸಾಂಸ್ಕೃತಿಕ ತಂಡ, ಭಾಷಾತಂಡ, ಮಕ್ಕಳ ಸುರಕ್ಷಾ ಸಮಿತಿಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡು ಶಿಸ್ತು, ಶ್ರದ್ಧೆ, ನಿಯಮ ಪಾಲನೆ, ಸಹಕಾರ, ನಾಯಕತ್ವ, ಸೃಜನಶೀಲತೆ, ಜವಬ್ದಾರಿ ಹಂಚಿಕೆ, ಪ್ರಾಮಾಣಿಕತೆ ಮುಂತಾದ ವರ್ತನಾ ಬದಲಾವಣೆಗಳನ್ನು ಉಂಟು ಮಾಡುವಲ್ಲಿ ಕಲಿಕಾ ಅನುಭವಗಳು ಸ್ವ–ಕಲಿಕೆ ಮತ್ತು ಸ್ವ–ಅವಲೋಕನವಾಗಿ ಯಶಸ್ಸು ಕಂಡಿವೆ. ಕ್ರೀಡಾಕೂಟ, ಹೊರಸಂಚಾರ, ಕ್ಷೇತ್ರ ಭೇಟಿ, ಪ್ರವಾಸ, ಪ್ರತಿಭಾ ಕಾರಂಜಿ ರಾಷ್ಟ್ರೀಯ ಹಬ್ಬಗಳ ಆಚರಣೆಯಲ್ಲಿ ಸಾಮೂಹಿಕ ಕವಾಯತು ಮತ್ತು ನೃತ್ಯ ಪ್ರದರ್ಶನದ ಜೊತೆಗೆ ಇಲಾಖೇತರ ಚಟುವಟಿಕೆಗಳಾದ ಚಿತ್ರಕಲಾ ಸ್ಪರ್ಧೆ, ವಿಜ್ಞಾನ ಕ್ವಿಜ್ ಸ್ಪರ್ಧೆ, ಪಠ್ಯ ವಿಷಯವಾರು ಸ್ಪರ್ಧೆಗಳು ಮಕ್ಕಳ ದಸರಾ ಸ್ಪರ್ಧೆಗಳನ್ನು ಅನೇಕ ಸಂಘ ಸಂಸ್ಥೆಗಳು ನಡೆಸುತ್ತಿದ್ದು, ಅವುಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸುವಂತೆ ಪ್ರೇರೇಪಿಸುವ ಮೂಲಕ ಶಿಕ್ಷಕರು ಸೂಕ್ತ ಸಲಹೆ ಮತ್ತು ಮಾರ್ಗದರ್ಶನದೊಂದಿಗೆ ಸಹಕರಿಸುತ್ತಿದ್ದಾರೆ. ಈ ಮೂಲಕ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳು ಅರಳುವ ಅವಕಾಶಗಳಾಗಿ ನಮ್ಮ ಶಾಲಾ ಯಶಸ್ಸಿನ ಶಿಖರಕ್ಕೆ ಕೀರ್ತಿಯ ಗರಿಗಳನ್ನು ಹೆಚ್ಚಿಸಿವೆ.

1. **ಶಾಲಾ ಸಂಸತ್ತು:–**

"ಇಂದಿನ ಮಕ್ಕಳೇ ನಾಳಿನ ಪ್ರಜೆಗಳು", ಇಲ್ಲಿ ಪಠ್ಯಕ್ಕೆ ಸಂಬಂಧಿಸಿದ ಪಾಠಗಳನ್ನಷ್ಟೆ ಅಲ್ಲದೆ ಭಾವಿ ಬದುಕಿಗೆ ಬೇಕಾದ ಪೂರಕ ಶಿಕ್ಷಣವನ್ನೂ ನೀಡುವುದಾಗಿದೆ, ಅದರಂತೆ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸಲು, ಆಡಳಿತದ ವೈಖರಿಯನ್ನು ಅರಿಯಲು ಹಲವು ತಂಡಗಳನ್ನು ರಚಿಸಲಾಗಿದೆ. ಅದರಲ್ಲಿ 'ಶಾಲಾ ಸಂಸತ್ತು' ಒಂದು. ಪ್ರತಿ ವರ್ಷವೂ ಪ್ರಜಾಪ್ರಭುತ್ವದ ಆಶಯದಂತೆ ಶಾಲಾ ಸಂಸತ್ತು ರಚನೆಯಾಗುತ್ತದೆ.

ಮತದಾನಕ್ಕೆ ಮತದಾರರ ಗುರುತಿನ ಚೀಟಿ ಕಡ್ಡಾಯವಾಗಿದ್ದು, ಪ್ರತಿ ವಿದ್ಯಾರ್ಥಿ ತನ್ನ STS ನಂಬರನ್ನು ಬರೆದು ತರುವುದಾಗಿದೆ. ಚುನಾವಣಾ ಅಧಿಕಾರಿಗಳು ಪರಿಶೀಲಿಸಿ ಮತದಾನಕ್ಕೆ ಅನುವು ಮಾಡಿಕೊಟ್ಟು ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು ಹಂತ ಹಂತವಾಗಿ ನಡೆಸಲಾಗುತ್ತದೆ ಈ ವರ್ಷದ ಶಾಲಾ ಸಂಸತ್ತಿನ ಮಾರ್ಗದರ್ಶಿ ಶಿಕ್ಷಕರಾದ ಶ್ರೀಮತಿಯರಾದ ಭಾಗಿರಥಿ ಎಂ.ಕೆ, ಪ್ರೇಮ್ ಲೀಲಾ, ರೋಜ್ ಮೇರಿ, ಜಯಲಕ್ಷ್ಮಿ ಕನ್ನ ನಾಯ್ಕ ಇವರೆಲ್ಲರ ನಿರ್ದೇಶನದಂತೆ 32 ವಿದ್ಯಾರ್ಥಿಗಳು ತಮ್ಮ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಈ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಗಳ ಕಾರ್ಯ ಕ್ಷಮತೆಯನ್ನು ಅರಿಯಲು "ಅಣಕು ಸಂಸತ್" ಅಧಿವೇಶನವನ್ನು ನಡೆಸಿದರು. ಇದು ಅವರ ನಾಯಕತ್ವ ಗುಣವನ್ನು ಬಲಪಡಿಸುತ್ತಿರುವುದು ಶ್ಲಾಘನೀಯ.

 

### 2. ಮಕ್ಕಳ ಸುರಕ್ಷಾ ಸಮಿತಿ

ಮಕ್ಕಳ ಸುರಕ್ಷತೆಯ ಸಲುವಾಗಿ ಶಾಲೆಯಲ್ಲಿ "ಮಕ್ಕಳ ಸುರಕ್ಷತಾ ಸಮಿತಿ"ಯನ್ನು ರಚನೆ ಮಾಡಿದ್ದು ಈ ಸಮಿತಿಗೆ ಶಾಲೆಯ ಮುಖ್ಯ ಶಿಕ್ಷಕರು ಮಾರ್ಗದರ್ಶಕರಾಗಿದ್ದಾರೆ. **"1098 ಮಕ್ಕಳ ಸಹಾಯವಾಣಿ"**ಯನ್ನು ಮಕ್ಕಳಿಗೆ ತಿಳಿಸಲಾಗಿದೆ. ಮುಖ್ಯೋಪಾಧ್ಯಯರ ಜೊತೆ ಶ್ರೀಮತಿಯರಾದ ದೊಡ್ಮನಿ ಸರೋಜ, ನಂದಾ ಎ.ಎನ್., ನಾಗರತ್ನ ಎಂ ಆರ್, ರವರು ಸದಸ್ಯ ಮಕ್ಕಳ  ಸಮಿತಿಯಲ್ಲಿ ಇದ್ದು ಯಾವುದೇ ಮಕ್ಕಳಿಗೆ ತೊಂದರೆಯಾದಲ್ಲಿ ಸಮಸ್ಯೆ ಪರಿಹರಿಸುವುದು ಇದರ ಪ್ರಥಮ ಆಧ್ಯತೆಯಾಗಿದೆ. **ಮಕ್ಕಳ ಸಲಹಾ ಪೆಟ್ಟಿಗೆ** ಇಟ್ಟಿದ್ದು ಮಕ್ಕಳಿಗೆ ಅನುಕೂಲ ಮಾಡಲಾಗಿದೆ.  ಈಗಾಗಲೇ ಈ ಶಾಲೆಗೆ ಮಕ್ಕಳನ್ನು ಕರೆದುಕೊಂಡು ಬರುವ ವ್ಯಾನ, ಆಟೋ ಚಾಲಕರ ಮಾಹಿತಿಯನ್ನು ಪಡೆದಿರುತ್ತೇವೆ.

### 3. ಶಾಲಾ ಸಾಂಸ್ಕೃತಿಕ ಸಂಘ

ಕಲೆಗಳ ಆಗರ ನಮ್ಮ ಈ ಕರ್ನಾಟಕ ರಾಜ್ಯ. ಕಲೆ, ಸಾಹಿತ್ಯ, ಸಂಸ್ಕೃತಿಯ ವೈವಿಧ್ಯತೆಯನ್ನು ನಾವು ಇಲ್ಲಿ ಕಾಣಬಹುದಾಗಿದೆ. ಇದಕ್ಕೆ ಪೂರಕವಾಗಿ ಮುಂದಿನ ಭಾವಿ ಪ್ರಜೆಗಳನ್ನು ತಯಾರು ಮಾಡುವ ಶಿಕ್ಷಣಕೇಂದ್ರದಲ್ಲಿ ಮಕ್ಕಳಿಗೆ ವಿದ್ಯೆಯ ಜೊತೆಗೆ ಮನಸ್ಸಿಗೆ ಆನಂದವನ್ನು ನೀಡುವುದರ ಮೂಲಕ, ಅವರಲ್ಲಿ ಅಡಗಿರುವ ಸೂಪ್ತ ಸೃಜನಾಶೀಲತೆಯನ್ನು ಹೊರ ತೆಗೆಯಲು, ಮಕ್ಕಳನ್ನು ಅವರವರ ವೈಯಕ್ತಿಕ ಕಾರ್ಯದಲ್ಲಿ ತೊಡಗಿಸುವ ಸಲುವಾಗಿ ಸಂಸ್ಕೃತಿಕ ತಂಡವನ್ನು ರಚಿಸುವುದು ಮುಖ್ಯವಾಗಿದೆ.

ಪ್ರತಿ ವರ್ಷದಂತೆ ಈ ಬಾರಿಯೂ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶ್ರೀಮತಿಯರಾದ ಪುಷ್ಪವಲ್ಲಿ ಎಸ್.ಕೆ., ದೊಡ್ಡವೀರಪ್ಪ ಹಳ್ಳೂರು, ಕನ್ಯಾಕುಮಾರಿ ಚಿಂದಿ, ಮಂಜುಳಾ ಬಿ.ಎಂ ಇವರ ನಿರ್ದೇಶನದಲ್ಲಿ ಸದಸ್ಯ ವಿದ್ಯಾರ್ಥಿಗಳ ಸಹಕಾರದಿಂದ ಈ ಸಂಘ ಕಾರ್ಯ ನಿರ್ವಹಿಸುತ್ತಿದೆ.

ತಿಂಗಳವಾರು ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು, ಭಕ್ತಿಗೀತೆ, ಕಂಠಪಾಠ, ಆಶುಭಾಷಣ, ಭಾಷಣ, ಕ್ಲೆಮಾಡಲಿಂಗ್, ಕೇಶವಿನ್ಯಾಸ, ಚಿತ್ರಕಲೆ, ರಂಗೋಲಿ, ಛದ್ಮವೇಷ, ಪ್ರಬಂಧ ಸ್ಪರ್ಧೆ, ಬೆಂಕಿ ರಹಿತ ಅಡುಗೆ, ಭಾವಗೀತೆ, ಇತ್ಯಾದಿಗಳನ್ನು ಆಯೋಜಿಸಲಾಗುವುದು. ಪ್ರತಿ ತಿಂಗಳ ಕೊನೆಯ ಶುಕ್ರವಾರದಂದು ಪ್ರತಿ ತರಗತಿವಾರು, ಪ್ರತಿಯೊಂದು ಮಗುವಿಗೂ ಸಹ ಅವಕಾಶ ನೀಡಲಾಗುವುದು. ಈ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ನೀಡಿ ಪ್ರೋತ್ಸಾಹ ನೀಡಲಾಗುತ್ತದೆ.

- ❖ ಶಿವಮೊಗ್ಗ ಜಿಲ್ಲಾ ಸ್ಕೌಟ್ & ಗೈಡ್ಸ್ ವತಿಯಿಂದ 2018–19 ನೇ ಸಾಲಿನಲ್ಲಿ ಆಯೋಜಿಸಿದ 'ಇಂಧನ ರಹಿತ ಅಡುಗೆ' ಕಾರ್ಯಕ್ರಮದಲ್ಲಿ 7ನೇ ತರಗತಿಯ ಕು|| ಪಲ್ಲವಿ ಜಿ. ಮತ್ತು ತಂಡವು ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ.






- ಪ್ರತಿ ವರ್ಷವು ಪ್ರತಿಭಾ ಕಾರಂಜಿಯಲ್ಲಿ ಬರುವ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಅತ್ಯಂತ ಹೆಚ್ಚು ಬಹುಮಾನಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.




ಈ ರೀತಿಯ ಸ್ಪರ್ಧೆಗಳನ್ನು ಆಯೋಜಿಸುವುದರಿಂದ ಮಕ್ಕಳಲ್ಲಿ ಸೃಜನಶೀಲತೆ, ಸಮಯಪಾಲನೆ, ಶಿಸ್ತು, ವೈಯಕ್ತಿಕವಾಗಿ ಭಾಗವಹಿಸುವಿಕೆ, ಆಸಕ್ತಿ ಉತ್ತಮ ಹವ್ಯಾಸ ಇತ್ಯಾದಿ ಗುಣಗಳು ಬೆಳೆಯಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಜೀವನಕ್ಕೆ ಈ ಎಲ್ಲಾ ಚಟುವಟಿಕೆಗಳು ಪೂರಕವಾಗಿ ಸಮಾಜದಲ್ಲಿ ಉತ್ತಮ ನಾಗರಿಕನಾಗಿಸಲು ಸಹಕಾರಿಯಾಗಿದೆ.

**ಭಾಷಾ ಸಂಘ**

**"ಭಾವನೆಗಳ ಅಭಿವ್ಯಕ್ತಿಗೆ ಭಾಷೆ ಒಂದು ಮಾಧ್ಯಮ"**

ಪ್ರಾಥಮಿಕ ಹಂತದಲ್ಲಿ ಭಾಷಾ ಕಲಿಕೆ ಅತ್ಯಂತ ಮಹತ್ವದ್ದಾಗಿದೆ. ನಮ್ಮ ಶಾಲೆಯಲ್ಲಿ ಪ್ರಥಮ, ದ್ವಿತಿಯ ಹಾಗೂ ತೃತೀಯ ಭಾಷೆಗಳಾಗಿ ಇಂಗ್ಲೀಷ್, ಕನ್ನಡ ಹಾಗೂ ಹಿಂದಿಯನ್ನು ಕಲಿಯುತ್ತಾರೆ. ಈ ಭಾಷೆಗಳ ಕಲಿಕೆಯಲ್ಲಿ ಪ್ರಭುತ್ವ ಸಾಧಿಸಲು ಅಗತ್ಯವಾದ ಚಟುವಟಿಕೆಗಳನ್ನು ಭಾಷಾಸಂಘ ಏರ್ಪಡಿಸುತ್ತದೆ. ಈ ಸಂಘವು ಶ್ರೀಮತಿಯರಾದ ಯಶೋಧ, ನುಸ್ರತ್ ಜಹಾನ್ ಮತ್ತು ದೀಪಾ ಕುಬಸದ್ ರವರ ಮೇಲ್ವಿಚಾರಣೆಯಲ್ಲಿ 6 ಮತ್ತು 7ನೇ ತರಗತಿ 12 ಮಕ್ಕಳ ಸದಸ್ಯತ್ವದಲ್ಲಿ ಕಾರ್ಯನಿರ್ವಹಿಸುತ್ತದೆ.

- **"ಗ್ರಂಥಾಲಯವಿಲ್ಲದ ಶಾಲಾ ಕಾಲೇಜುಗಳು ಆತ್ಮವಿಲ್ಲದ ದೇಹವಿದ್ದಂತೆ"** ಶಾಲೆ ವಿದ್ಯಮಂದಿರ, ನಮ್ಮ ಶಾಲೆಯಲ್ಲಿ ಸುಮಾರು 2500 ಪುಸ್ತಕಗಳಿರುವ ಉತ್ತಮ ಗ್ರಂಥ ಭಂಡಾರವಿದೆ. ಶ್ರೀಮತಿ ಭಾಗೀರತಿ ಎಂ.ಕೆ. ರವರ ನಿರ್ವಹಣೆಯಲ್ಲಿ ಆಯಾ ತರಗತಿವಾರು ಪುಸ್ತಕಗಳನ್ನು ನೀಡುತ್ತಾ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸವನ್ನು ಪ್ರೇರೇಪಿಸಲಾಗುತ್ತಿದೆ. ಓದಿ ಅರ್ಥೈಸಿಕೊಂಡು ಜ್ಞಾನ ಭಂಡಾರವನ್ನು ವೃದ್ಧಿಸಿಕೊಳ್ಳಲು ಸಹಕಾರಿಯಾಗಿದೆ.
- ಪಠ್ಯಪೂರಕ CCE ಚಟುವಟಿಕೆಗಳನ್ನೊ ಒಳಗೊಂಡಂತೆ ಮಕ್ಕಳು ಅತ್ಯಂತ ಕುತೂಹಲದಿಂದ ಭಾಷಾ ಆಟಗಳಲ್ಲಿ ತೊಡಗುತ್ತಾರೆ. ಸ್ವರಚಿತ ಹನಿಗವನಗಳು, ಒಗಟುಗಳು, ಕಥೆ ಕಟ್ಟುವಿಕೆ, ಪ್ರಬಂಧ ರಚನೆ, ಆಶುಭಾಷಣ ಸ್ಪರ್ಧೆಯಂತಹ ಚಟುವಟಿಕೆಗಳನ್ನು 'Bag Less Day'ಯ ಅರ್ಥಪೂರ್ಣ ಆಚರಣೆಯಾಗಿ ಕೈಗೊಳ್ಳಲಾಗುತ್ತದೆ. ಈ ಎಲ್ಲಾ ಪ್ರೋತ್ಸಾಹಗಳ ಫಲವಾಗಿ "ದುರ್ಗಿಗುಡಿ ಸುದ್ಧಿ ಪತ್ರಿಕೆ" ಹೊರಹೊಮ್ಮುತ್ತಿದ್ದು

ಮಕ್ಕಳ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ವರ್ಷದ ಕೊನೆಯಲ್ಲಿ ಮಕ್ಕಳ ಕೈಬರಹದ ಕ್ರೋಢೀಕೃತ ಕಿರುಹೊತ್ತಿಗೆಯನ್ನು ರೂಪಿಸುವ ನಿಟ್ಟಿನಲ್ಲಿ ಪ್ರಯತ್ನ ಸಾಗುತ್ತಿರುವುದು ವಿಶೇಷವಾಗಿದೆ.





4. ವಿಜ್ಞಾನ ಸಂಘ

**"**The science of today is the technology of tomorrow" –Edward Teller.

ವಿಜ್ಞಾನ ಒಂದು ವಿಶೇಷವಾದ ಕ್ರಮಬದ್ಧವಾದ ಜ್ಞಾನ. ದಿನನಿತ್ಯ ಜೀವನದ ಅನೇಕ ಸಂದರ್ಭಗಳಲ್ಲಿ ಮನಸ್ಸನ್ನು ಕೆಣಕುವ ಪ್ರಶ್ನೆಗಳಿಗೆ ಸೂಕ್ತ ಉತ್ತರ ಹುಡುಕಲು, ಜ್ಞಾನದ ಬೆಳವಣಿಗೆಯಲ್ಲಿ ಬರುವ ಕುತೂಹಲಗಳನ್ನು ತಣಿಸಲು ಕಾರ್ಯ ಕಾರಣ ಕ್ರಿಯೆಗಳನ್ನು ಸಾಬೀತುಪಡಿಸಲು ವಿಜ್ಞಾನ ಸಂಘವು ಪ್ರಮುಖ ಪಾತ್ರ ವಹಿಸುತ್ತಿದೆ. Science it's like magic but real ಎಂಬಂತೆ ವಾರಕ್ಕೊಂದು ವಿಜ್ಞಾನ ಪ್ರಯೋಗ, ವಿಜ್ಞಾನ ಕ್ವಿಜ್‌ಗಳನ್ನು ಆಯಾ ತರಗತಿವಾರು ಪಠ್ಯ ಪೂರಕ CCE ಚಟುವಟಿಕೆಗಳಾಗಿ ನಡೆಸಲಾಗುವುದು. ಪ್ರತಿ ವರ್ಷ **ಫೆಬ್ರವರಿ 28** ರಂದು **'ವಿಶ್ವ ವಿಜ್ಞಾನ ದಿನ'**ದ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನವನ್ನು ಏರ್ಪಡಿಸುವುದರಿಂದ ಮಕ್ಕಳಲ್ಲಿ ಅಡಗಿದ ಪುಟ್ಟ ವಿಜ್ಞಾನಿಯನ್ನು ಬೆಳೆಸಲು ಜೊತೆಗೆ ವೈಜ್ಞಾನಿಕ ಮನೋಭಾವನೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.





ಮೀನಾ ತಂಡ : – ನಮ್ಮ ಶಾಲೆಯಲ್ಲಿ "ಮೀನಾ ತಂಡ" ರಚನೆ ಮಾಡಿದ್ದು ಈ ತಂಡದ ಮೇಲ್ವಿಚಾರಕರು ಮುಖ್ಯ ಶಿಕ್ಷಕರು ಆಗಿರುತ್ತಾರೆ. ಇತರೆ ಶಿಕ್ಷಕರು ಈ ತಂಡದ ಮಾರ್ಗದರ್ಶಕರಾಗಿರುತ್ತಾರೆ ಮತ್ತು ಸ್ವಯಂ ಪ್ರೇರಿತ. ಆಸಕ್ತ 5, 6, 7 ತರಗತಿಯ 17 ವಿದ್ಯಾರ್ಥಿನಿಯರು ಕಿಶೋರಿಯರು ಮತ್ತು 5 ವಿದ್ಯಾರ್ಥಿಗಳು ಕಿಶೋರರು ಎಂದು ನೇಮಕವಾಗಿರುತ್ತಾರೆ.

ಒಬ್ಬ ವಿದ್ಯಾರ್ಥಿ ತಂಡದ ನಾಯಕಿ ಆಗಿರುತ್ತಾಳೆ. ಹೆಣ್ಣು ಮಕ್ಕಳ ಋತುಚಕ್ರದ ಬಗ್ಗೆ, ದೇಹದ ಅಂಗಾಂಗಗಳ ಸ್ವಚ್ಛತೆ ಬಗ್ಗೆ, ಶೌಚಾಲಯದ ಬಳಕೆ, ಶುದ್ಧ ಉಡುಪುಗಳ ಬಗ್ಗೆ, ವಿವರವಾಗಿ ಸಲಹೆ ನೀಡಲಾಯಿತು. ಇಲ್ಲಿ ಒಟ್ಟಾರೆ ವೈಯಕ್ತಿಕ ವ್ಯಕ್ತಿತ್ವದ ಅರಿವಿನ ಜೊತೆಗೆ ಸಾಮಾಜಿಕ ಜೀವನದಲ್ಲಿ ತಮ್ಮ ಪಾತ್ರದ ಜವಾಬ್ದಾರಿಯ ತಿಳುವಳಿಕೆಯನ್ನು ಮಕ್ಕಳು ಪಡೆಯುತ್ತಾರೆ. ಮಾರ್ಗದರ್ಶಿ ಶಿಕ್ಷಕರಾಗಿ ಶ್ರೀಮತಿಯರಾದ ನಾಗರತ್ನ ಎಸ್.ಆರ್, ಪೂರ್ಣಿಮಾ ಎಸ್.ಎಂ. ಮತ್ತು ಉಷಾರಾಣಿ ಎಂ.ಸಿ. ರವರು ಕಾರ್ಯನಿರ್ವಹಿಸುತ್ತಿದ್ದಾರೆ.


GMHPEMS Durgigudi, Shimoga
"Meena Team"
2019-2020
2019.09.25 12:11


Electronic Voting Machine
1 Usha Rani
2 Kala Vathi
3 Ravi
4 Jesintha
5 Nusrath
6 Rose Mari
7 Nagrathna
8 Yeshodha
9 Nansi
10 Bhagya Joythi
11 Iron LoBo
12 Deepa






2019-20
BEST OUT OF WESTE



